ಮತ್ಸ್ಯಾಲಯದ ಬಗ್ಗೆ

೧೯೩. (೧೫೩) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಸರ್ಕಾರವು ರಾಜ್ಯದಲ್ಲಿ ಮತ್ಸ್ಯಾಲಯವನ್ನು ತೆರೆಯಲು ತೀರ್ಮಾನಿಸಿದ್ದಾರೆಯೇ ?

ಆ) ಹಾಗಿದ್ದ ಪಕ್ಷದಲ್ಲಿ, ಯಾವಾಗ?

ಇ) ಹಾಗಿಲ್ಲದಿದ್ದರೆ, ಅದಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ಸ್ಯಾಲಯವನ್ನು ಕಬ್ಬನ್ ಪಾರ್ಕಿನಲ್ಲಿ ಸ್ಥಾಪಿಸುವ ಬಗ್ಗೆ ಆಡಳಿತ.

ಆ) ಮಂಜೂರಾತಿಯನ್ನು ದಿನಾಂಕ ೩೦-೧೧-೧೯೭೩ ರಂದು ನೀಡಿದ್ದಾಗಿದೆ. ಮತ್ಸ್ಯಾಲಯವು ದಿನಾಂಕ ೨೭-೮-೧೯೮೩ ರಲ್ಲಿ ಉದ್ಘಾಟಿಸಲಾಗಿ, ಸಾರ್ವಜನಿಕ ವೀಕ್ಷಣೆಗೆ ಈಗ ತೆರೆದಿಡಲಾಗಿದೆ.

ಇ) ಮೇಲಿನ (ಅ) ಮತ್ತು (ಆ) ಕ್ಕೆ ಇತ್ತ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮನವಿಗಳು

ಡಾ।। ವಿ.ಎಸ್. ಆಚಾರ್.—ನಾವು ಹಿಂದೆ ಈ ಸದನದಲ್ಲಿ ಕಿಳಿರ ನಿಯಮದ ಪ್ರಕಾರ ವಿಷಯವನ್ನು ಎತ್ತಿದಾಗ ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತೇವೆಂಬ ಭರವಸೆ ಕೊಟ್ಟಿದ್ದರೂ ಸಹ ಇದುವರೆವಿಗೂ ಇದಕ್ಕೆ ಸರ್ಕಾರದಿಂದ ಉತ್ತರ ಬರಲಿಲ್ಲ. ಆ ಬಗ್ಗೆ ತಮ್ಮ ಗಮನವನ್ನು ನಾನು ಸೆಳೆಯುತ್ತಿದ್ದೇನೆ. ವಿಶ್ವ ಹಿಂದೂ ಪರಿಷತ್ತಿನ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ರಾಮಾಯಣ ಮಹಾಭಾರತವನ್ನು ಹೇಳಿಕೊಡುವುದಕ್ಕೆ ಇದ್ದಂತಹ ಅನುಮತಿಯನ್ನು ಏಕಾಏಕಿ ನಿರಾಕರಣೆ ಮಾಡಿದ್ದಾರೆ, ರಾಜ್ಯ ಸರ್ಕಾರ. ರಾಜ್ಯದ ಮುಖ್ಯಮಂತ್ರಿಗಳು ರಾಮಕೃಷ್ಣ ಹೆಗಡೆ, ರಾಮರಾಜ್ಯ ಬರುತ್ತದೆ ಎಂಬ ಆಸೆಯನ್ನು ಮಣ್ಣುಪಾಲಾಗಿ ಮಾಡಿದ್ದಾರೆ. ಇದಕ್ಕಾಗಿ ಸಂಬಂಧಪಟ್ಟ ಸಂಸ್ಥೆಯವರು ಪರೀಕ್ಷೆಗೆ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೂ, ಶಿಕ್ಷಣ ಇಲಾಖೆಯ ಆಯುಕ್ತರವರು ಈ ಬಗ್ಗೆ ಹೊರಡಿಸಿದ ಆಜ್ಞೆ ಏಲ್ಲವನ್ನೂ ತಮ್ಮ ಗಮನಕ್ಕೆ ಈ ಹಿಂದೆಯೇ ಕಳುಹಿಸಿಕೊಟ್ಟಿದ್ದೇನೆ. ಆ ರೀತಿ ನಾನು ಹೇಳಿ ಇಂದಿಗೆ ೧೦ ದಿವಸಗಳಾಯಿತು. ಆದರೂ ಸರ್ಕಾರದಿಂದ ಇದರ ಬಗ್ಗೆ ಉತ್ತರ ಬರಲಿಲ್ಲ. ಮಾನ್ಯ ಮಂತ್ರಿಗಳನ್ನು ಇದರ ಬಗ್ಗೆ ಭರವಸೆ ಕೊಟ್ಟಿದ್ದೀರಿ ಪರೀಕ್ಷೆ ನಡೆಸುವುದಕ್ಕೆ ಅವರು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇಷ್ಟು ವರ್ಷ ಇದ್ದಂತಹ ಅನುಮತಿಯನ್ನು ಈಗ ರದ್ದು ಮಾಡಿದ್ದಾರೆ.

ಅಧ್ಯಕ್ಷರು.— ತಾವು ಕಿಳಿರ ಕೆಳಗೆ ವಿಷಯವನ್ನು ಎತ್ತಿದ್ದೀರಿ. ಮಂತ್ರಿಗಳು ಈ ಬಗ್ಗೆ ಉತ್ತರ ಕೊಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಡಾ।। ವಿ. ಎಸ್. ಆಚಾರ್ಯ.— ಮಾನ್ಯ ಮಂತ್ರಿಗಳು ಹಿಂದೆ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದರು. ಈ ಬಗ್ಗೆ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು.— ಉತ್ತರ ತಯಾರಾಗಿದ್ದರೆ ಅವರು ಹೇಳಬೇಕಾಗಿತ್ತು. ತಾವು ಪುನಃ ವಿವರಕ್ಕೆ ಹಿಂದಕ್ಕೆ ಹೋಗಬೇಕಾಗಿಲ್ಲ. ಕಾರಣ ಮಂತ್ರಿಗಳು ಇಲ್ಲೇ ಇದ್ದಾರೆ.

ಡಾ।। ವಿ. ಎಸ್. ಆಚಾರ್ಯ.—ಹಿಂದಿನ ಸರ್ಕಾರದವರು ಕೊಟ್ಟಂತಹ ಅನುಮತಿಯನ್ನು ಈ ಸರ್ಕಾರ ನಿರಾಕರಣೆ ಮಾಡಿದೆ, ಧಾರ್ಮಿಕ ವಿಷಯದ ಬಗ್ಗೆ ಪರೀಕ್ಷೆಯನ್ನು ನಡೆಸುವುದಕ್ಕೆ ಅವರು ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು.— ಮಂತ್ರಿಗಳಿಂದ ಉತ್ತರ ಸಿದ್ಧವಾಗಿಲ್ಲ ಎಂದು ಕಾಣುತ್ತದೆ. ಅವರು ಸುಮ್ಮನೆ ಕಳಿಯುತಿದ್ದಾರೆ.

ಡಾ।। ವಿ.ಎಸ್. ಆಚಾರ್ಯ.—ನಾವು ಒಂದು ವಾರದಿಂದ ಕಾಯುತ್ತಿದ್ದೇವೆ. ಆದರೆ ಇದುವರೆ ವಿಗೂ ಸರ್ಕಾರದಿಂದ ಉತ್ತರ ಬರದಿದ್ದುದರಿಂದ ತಮ್ಮ ಗಮನಕ್ಕೆ ತಂದಿದ್ದೇವೆ. ಇದರ ಬಗ್ಗೆ ಹೊರ ಡಿಸಿದಂತಹ ಸಂಬಂಧಪಟ್ಟ ಆಜ್ಞೆಗಳನ್ನೆಲ್ಲಾ ಕೊಟ್ಟಿದ್ದೇವೆ. ಕಳೆದ ವರ್ಷ ೨೪೫೦ ಜನ ಪಾಸಾಗಿ ದ್ದಾರೆ. ಇದರ ಬಗ್ಗೆ ಸರ್ಕಾರದ ನೀತಿ ಏನು? ಸರ್ಕಾರದ ಧೋರಣೆ ಏನುಎಂಬುವುದನ್ನು ಹೇಳಬೇಕು?

ಶ್ರೀ ಬಿ. ರಾಚಯ್ಯ.— ಮಾನ್ಯ ಸದಸ್ಯರು ಇವತ್ತು ಏನನ್ನು ಕೇಳುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅವರು ನೋಟೀಸ್ ಕೊಡದೆ ಕೇಳಿಬಿಟ್ಟಿದ್ದಾರೆ.

ಅಧ್ಯಕ್ಷರು.— ಹಿಂದೆ ಮಾನ್ಯ ಸದಸ್ಯರು ಸಿಸಿಳರ ಕೆಳಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದರ ಸಂಬಂಧವಾಗಿ ಉತ್ತರ ತಯಾರಾಗಿದೆಯೋ ಅಥವಾ ಇಲ್ಲವೋ?

ಶ್ರೀ ಬಿ. ರಾಚಯ್ಯ.— ಇಲ್ಲ ಸ್ವಾಮಿ.

ಡಾ।। ವಿ. ಎಸ್. ಆಚಾರ್ಯ.—ಈ ರೀತಿ ಸಭೆಯಲ್ಲಿ ಆಗುವುದಾದರೆ ಹೇಗೆ? ಶಿಕ್ಷಣ ಸಚಿವರು ಇದನ್ನು ಇಷ್ಟೊಂದು ಲಘುವಾಗಿ ತೆಗೆದುಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಕಳೆದ ಹತ್ತು ದಿವಸ ಹಿಂದೆಯೇ ಇದನ್ನು ಕೇಳಿದಂತಹವರು ಇವತ್ತು ಏನು ಹೇಳುತ್ತಾರೆಂಬುದು ಗೊತ್ತಿಲ್ಲ ಎಂದರೆ ಹೇಗೆ? ಇದರ ಬಗ್ಗೆ ಸರ್ಕಾರದ ಮನೋಭಾವ ಏನಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇದನ್ನು ಇಷ್ಟೊಂದು ಹಗುರವಾಗಿ ತೆಗೆದುಕೊಳ್ಳುವುದರ ವಿರುದ್ಧವಾಗಿ ನಾವು ತೀವ್ರವಾದ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡದೆ ಬೇರೆ ವಿಧಿಯಿಲ್ಲ.

ಅಧ್ಯಕ್ಷರು.— ಡಾ।। ಆಚಾರ್ಯರವರೇ ತಾವು ಸಭಾತ್ಯಾಗ ಮಾಡುತ್ತೇವೆ ಎಂದು ಹೇಳಿದರೆ ಅದಕ್ಕೆ ನಾನು ಏನನ್ನೂ ಹೇಳುವುದಕ್ಕಾಗುವುದಿಲ್ಲ. ಅದು ನಿಮಗೆ ಬಿಟ್ಟದ್ದು.

ಶ್ರೀ ಧರ್ಮಸಿಂಗ್.— ಮಾನ್ಯ ಸದಸ್ಯರು ಸಭಾತ್ಯಾಗ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಸರ್ಕಾರ ಅದರ ಬಗ್ಗೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಭೀಮಣ್ಣ ಖಂಡ್ರೆ.— ರಾಜ್ಯದಲ್ಲಿ ಎಷ್ಟೇ ಕಾನೂನುಗಳನ್ನು ಮಾಡಿದರೂ ಸಹ ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡುತ್ತಿಲ್ಲ.

ಶ್ರೀ ಸೂರ್ಯನಾರಾಯಣರಾವ್.— ಸರ್ಕಾರದ ನೀತಿ ಏನೆಂಬುದನ್ನು ಹೇಳಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಅಧ್ಯಕ್ಷರು.— ಈ ವಿಚಾರದ ಮೇಲೆ ಅವರು ಈಗಾಗಲೇ ಬೆಳಕು ಚೆಲ್ಲಿಬಿಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೂ ಹೋಗಿದೆ.

ಶ್ರೀ ಭೀಮಣ್ಣ ಖಂಡ್ರೆ.— ಸರ್ಕಾರದಿಂದ ಉತ್ತರ ಕೊಡುತ್ತಿಲ್ಲವಲ್ಲ;

ಅಧ್ಯಕ್ಷರು.— ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.— ಯಾವಾಗ ಕೊಡುತ್ತಾರೆಂಬುದನ್ನಾದರೂ ಹೇಳಲಿ.

ಶ್ರೀ ಎಂ.ಎಸ್. ಕೃಷ್ಣನ್.— ಶ್ರೀಮಾನ್ ಆಚಾರ್ರವರು ಶಾಲೆಗಳಲ್ಲಿ ನೀತಿ ಬೋಧನೆ ಮಾಡ ಬೇಕೆಂಬುದರ ಬಗ್ಗೆ ಹೇಳುತ್ತಿದ್ದಾರೆ. ಜೊತೆಗೆ ಇದರ ಬಗ್ಗೆ ಸರ್ಕಾರದ ನೀತಿ ಏನೆಂಬುವುದನ್ನೂ ಪ್ರಶ್ನೆ ಮಾಡಿದ್ದಾರೆ. ಸರ್ಕಾರದ ನೀತಿ ಏನು ಎಂಬುದನ್ನು ಹೇಳಬೇಕಾದರೆ ಕಾಲ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಅದು ನಿಮಗೆ ಗೊತ್ತಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ರಾಮಾಯಣ ಮಹಾಭಾರತ ಹೇಳಿಕೊಡುವುದು ಈ ದೇಶದಲ್ಲಿ ಹಳೆಯ ನೀತಿಯಾಗಿತ್ತು.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.— ಕಮ್ಯೂನಿಸ್ಟ್ ಪಾರ್ಟಿಯವರು ರಾಜ್ಯದಲ್ಲಿರುವ ಮಂದಿರ ಮತ್ತು ಚರ್ಚ್‌ಗಳನ್ನೆಲ್ಲಾ ಕಿತ್ತುಹಾಕಬೇಕೆಂದು ಹೇಳುತ್ತಾರೆಯೇ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರು ದಯವಮಾಡಿ ಕುಳಿತುಕೊಳ್ಳಿ. ನಾನು ನಿಂತಿದ್ದೇನೆ. ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಉತ್ತರ ತಯಾರಾಗಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಮಂತ್ರಿಗಳಿಂದ ಉತ್ತರ ಹೇಳಬೇಕೆಂದು ಅವರ ಮೇಲೆ ನಿರ್ಬಂಧ ಹಾಕುವುದಕ್ಕಾಗುವುದಿಲ್ಲ.

ಡಾ।। ವಿ. ಎಸ್. ಆಚಾರ್ಯ.—ಸರ್ಕಾರದ ನಿರ್ಲಕ್ಷ್ಯ ಮನೋಭಾವವನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡಬೇಕಾಗಿದೆ ಧಾರ್ಮಿಕ ನೀತಿಯನ್ನು ಅಲಕ್ಷ್ಯ ಮಾಡಿದ್ದರಿಂದಲೇ ಇವತ್ತು ಸಮಾಜದಲ್ಲಿ ಭ್ರಷ್ಟಾಚಾರವಾಗುತ್ತಿರುವುದು, ಲೂಟಪಾಟೋಪಗಳಾಗುತ್ತಿರುವುದು. ಶಿಕ್ಷಣ ಪದ್ಧತಿಯಲ್ಲಿ ನೀತಿ ಬೋಧನೆ ಹಾಗೂ ಧಾರ್ಮಿಕ ಬೋಧನೆಯ ಅಭಾವ ಇದೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಬಂಡವಾಳಗಾರರ ಸಮಾಜ ಇಲ್ಲಿರಬೇಕು, ಇವರು ನೀತಿಯನ್ನು ಬೋಧಿಸುತ್ತಿದ್ದಾರೆ. ಬಂಡವಾಳಶಾಹಿಗಳ ಸಮಾಜವನ್ನು ಇಲ್ಲಿ ಬೆಳೆಸುತ್ತೀರೇನು ?

೧೨-೦೦ ಘಂಟೆ ಮಧ್ಯಾಹ್ನ

ಶ್ರೀ ಬಿ.ಎಸ್.ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ನಿರಾಕರಿಸುತ್ತಿದ್ದಾರೆ. ಈ ಒಂದು ನೀತಿಯನ್ನು ನಾವು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಭೀಮಣ್ಣ ಖಂಡ್ರೆ.—ಈ ದೇಶದಲ್ಲಿ ರಾಮಾಯಣ ಮಹಾಭಾರತ ಬೇಕು.

ಶ್ರೀ ಪಿ. ರಾಮದೇವ್.—ಕಳೆದ ಹತ್ತು ದಿವಸಗಳಿಂದ ಸತತವಾಗಿ ಬೆಂಗಳೂರಿನಲ್ಲಿ ಮಳೆ ಬೀಳುತ್ತಿದೆ. ಹೆಚ್ಚಿನ ಮಳೆಯಿಂದಾಗಿ ಸುಮಾರು ಮನೆಗಳು ಬಿದ್ದು ಹೋಗಿವೆ. ಹತ್ತು ಸಾವು ಉಂಟಾಗಿದೆ, ಕೆಲವರಿಗೆ ಅನೇಕ ಗಾಯಗಳಾಗಿ ಆಸ್ಪತ್ರೆಗೆ ಸೇರಿದ್ದಾರೆ. ಈಬಗ್ಗೆ ಸರ್ಕಾರದವರು ಇದರಲ್ಲಿ ನೊಂದವರಿಗೆ ಪರಿಹಾರ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಳೆ ಬರುವುದಕ್ಕೂ ಸರ್ಕಾರಕ್ಕೂ ಏನು ಸಂಬಂಧ?

ಶ್ರೀ ಪಿ. ರಾಮದೇವ್.—ವಿಪರೀತ ಮಳೆಯಿಂದಾಗಿ ಅನೇಕ ಸಾವುಗಳು ಆಗಿವೆ. ಹಿಂದೆ ಎಂದೂ ಇಂಥ ಮಳೆಯನ್ನು ನಾವು ಕಂಡಿರಲಿಲ್ಲ. ನನ್ನ ಕ್ಷೇತ್ರದಲ್ಲಿ ಮನೆಗಳು ಕುಸಿದು ಬಿದ್ದು ಹತ್ತಾರು ಜನರು ಗಾಯಗೊಂಡಿದ್ದಾರೆ. ಕೆಲವರನ್ನು ಆಸ್ಪತ್ರೆಗೂ ಸೇರಿಸಿದ್ದಾರೆ. ಸರ್ಕಾರದವರು ಇದರ ಬಗ್ಗೆ ಪರಿಹಾರ ಕೊಡತಕ್ಕದ್ದನ್ನು ಮಾಡಬೇಕು. ಕಾರ್ಪೊರೇಷನ್‌ನವರು ಡ್ರೇನ್ಸ್ ಕ್ಲೀಯರೆನ್ಸ್ ಮಾಡಬೇಕು. ಆಮೇಲೆ ಮನೆಗಳು ಬಿದ್ದು ಹೋಗಿರತಕ್ಕ ಕಡೆ ವಸತಿ ಸೌಕರ್ಯವನ್ನು ಮಾಡಬೇಕು ಹೆಚ್ಚಾಗಿ ಬಡವರ ಮನೆಗಳು ಬಿದ್ದು ಹೋಗಿರುವುದರಿಂದ ಸೂಕ್ತ ಪರಿಹಾರವನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಎರಡನೆಯದಾಗಿ, ಎಲೆಕ್ಟ್ರಿಕಲ್ ಕನೆಕ್ಷನ್ಸ್ ಸಹ ಸರಿಯಾಗಿ ಆಗದೆ ಷಾರ್ಟ್ ಸರ್ಕ್ಯೂಟ್‌ಗಳು ಆಗುತ್ತಿವೆ. ಇದನ್ನು ತಡೆಗಟ್ಟಿತಕ್ಕ ಬಗ್ಗೆ ಮುನಿಸಿಪಲ್ ಆಕ್ಟನಲ್ಲಿದೆ. ಕಾರ್ಪೊರೇಷನ್‌ನವರು ಯಾವುದಾದರೂ ಪರ್ಮಿಷನ್ ವೀಕ್ ಆಗಿದ್ದರೆ ಅದನ್ನು ಸರಿಪಡಿಸಿ ಒಡೆದು ಹಾಕತಕ್ಕ ಕಾರ್ಯವನ್ನು ಮಾಡಬೇಕು. ಆಗತಕ್ಕ ಅನಾಹುತಗಳನ್ನು ತಪ್ಪಿಸಲಿಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮ ಹೇಳಿಕೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೊ ಇಲ್ಲವೋ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ಮಳೆಯಿಂದ ಸುಮಾರು ೨೫ ಮನೆಗಳು ಬಿದ್ದು ಹೋಗಿವೆ. ಇದರಲ್ಲಿ ತೊಂದರೆಯಾಗಿರುವುದು ಬಡವರಿಗೆ. ಅವರಿಗೆ ಯಾವುದಾದರೂ ಬೇರೆ ವ್ಯವಸ್ಥೆ ಮಾಡಬೇಕು ಮತ್ತು ಪರಿಹಾರ ಕೊಡತಕ್ಕ ಕೆಲಸವನ್ನು ತಾವು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ನನ್ನ ಕ್ಷೇತ್ರದಲ್ಲಿಯೂ ಸಹ ಮಳೆಯಿಂದ ಅನೇಕ ಮನೆಗಳು ಬಿದ್ದು ಹೋಗಿವೆ. ಈ ವಿಷಯವನ್ನು ಸರ್ಕಾರದವರು ಲಘುವಾಗಿ ತೆಗೆದುಕೊಳ್ಳಬಾರದು.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಇಲ್ಲದೆ ಹಾಗೆ ವಿಷಯಗಳನ್ನು ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ.ನಾರಾಯಣಕುಮಾರ್.—ಗರ್ಭಿಣಿ ಹೆಂಗಸೊಬ್ಬರು ಆಸ್ಪತ್ರೆಯಲ್ಲಿ ಸಾವು ನೋವಿನ ಜೊತೆಯಲ್ಲಿ ಹೋರಾಟ ಮಾಡುತ್ತಿದ್ದಾಳೆ, ಬಡವರಿಗೆ ಮನೆಗಳನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನಾಳೆಯ ದಿವಸವೇ ಮಾನ್ಯ ಮಂತ್ರಿಗಳು ಮಳೆಯಲ್ಲಿ ನೊಂದವರ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು.—ತಾವುಗಳು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ.

ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣರ ತಾಲ್ಲೂಕಿನಲ್ಲಿ ನಾಲ್ಕು ಹರಿಜನ ಬಂಧುಗಳ ಮನೆ ಸುಟ್ಟು ಹೋಗಿ ಜೀವ ಸಹಿತ ಅವರು ದಹನವಾಗಿದ್ದಾರೆ, ಇದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಡಬೇಕು. ಪಟ್ಟಣಗಳಲ್ಲಿರುವ ಹರಿಜನರ ಬಗ್ಗೆ ಸರ್ಕಾರದವರು ಕಾಳಜಿ ವಹಿಸುತ್ತಾರೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಹರಿಜನ ಗಿರಿಜನರಿಗೆ ಸಾಕಷ್ಟು ಕಾಳಜಿ ಇಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಘಟನೆ ಸವರ್ಣೀಯರಿಗೆ ಯಾರೊಬ್ಬರಿಂದ ಉದ್ದೇಶಪೂರ್ವಕವಾಗಿ ಆದಂಥಾದ್ದು ಅಲ್ಲ. ಇದು ವೈಯಕ್ತಿಕ ಕಾರಣದಿಂದ ಆಗಿದೆ, ಒಂದು ಕುಟುಂಬದಲ್ಲಿ ಒಬ್ಬ ಹೆಂಗಸು ಇದ್ದಳು, ಆ ಹೆಂಗಸು ಬೇರೊಂದು ಊರಿನ ಮತ್ತೊಬ್ಬನೊಂದಿಗೆ ಸಂಬಂಧವನ್ನು ಹೊಂದಿದ್ದಳು. ಅವನು ಮದುವೆಯಾಗಬೇಕು ಎಂದು ಅವಳನ್ನು ಕೇಳುತ್ತಿದ್ದ, ಅವಳು ಒಪ್ಪುತ್ತಾ ಇರಲಿಲ್ಲ. ಇವನು ಮದುವೆಯಾಗು ಎಂದು ಅವಳನ್ನು ಹೆದರಿಸುತ್ತಿದ್ದ. ಮದುವೆಯಾಗದಿದ್ದರೆ ಮನೆಯನ್ನು ಸುಟ್ಟು ಹಾಕುತ್ತೇನೆಂದು ಹೇಳಿ ಅವಳ ಮನೆಗೆ ಬೆಂಕಿ ಹಾಕಿದ್ದಾನೆ. ಇದನ್ನು ದೊಡ್ಡದು ಮಾಡುವುದು ಸರಿಯಲ್ಲ. ನಾವು ಘಟನೆಯಿಂದ ಘಟನೆಗೆ ನೋಡಬೇಕು. ತಂದೆ ಮಗನನ್ನು ಕೊಲ್ಲುತ್ತಾನೆ, ಮಗ ತಂದೆಯನ್ನು ಕೊಲ್ಲುತ್ತಾನೆ, ಇದು ಆಗಬಾರದು ಎಂದು ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಹರಿಜನರ ಜೀವ ಹೋಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಕ್ರಿಮಿನಲ್ ಕೇಸ್ ಆಗಿದೆ. ಅವನು ವೈಯಕ್ತಿಕ ಕಾರಣಕ್ಕಾಗಿ ಬೆಂಕಿ ಹಾಕಿ ಮನೆಯನ್ನು ಸುಟ್ಟಿದ್ದಾನೆ. ಅದಕ್ಕೆ ಅಸೆಂಬ್ಲಿಯಲ್ಲಿ ಹೇಳಿಕೆ ಕೊಡುವುದು ಹೇಗೆ? ಇದರ ಮೇಲೆ ಪೋಲಿಸರು ಕೇಸು ಹಾಕುತ್ತಾರೆ, ಕೋರ್ಟಿನಲ್ಲಿ ಏನು ತೀರ್ಮಾನ ಕೊಡುತ್ತಾರೋ ಅದರಂತೆ ಅವನು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ನಿಯಮ ೩೩೪ರ ಮೇರೆಗೆ

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ರಸ್ತೆ ಸಾರಿಗೆಯ ಒಬ್ಬ ಅಧಿಕಾರಿಯ ಬಗ್ಗೆ ನೋಟೀಸನ್ನು ಕಳುಹಿಸಿದ್ದಾರೆ. ಅದನ್ನು ರೂಲ್ ೩೩೪ರ ಕೆಳಗೆ ತೆಗೆದುಕೊಳ್ಳುವುದು ಸೂಕ್ತವೇ It is a routine administrative matter. Don't you think so ?

Sri. S. Bangarappa.—I would like to justify why this matter comes under rule 334. ತಾವು ಒಂದು ನಿಮಿಷ ನನಗೆ ಅವಕಾಶವನ್ನು ಕೊಟ್ಟರೆ ರೂಲ್ ೩೩೪ರಲ್ಲಿ ಹೇಗೆ ಇದನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಹೇಳುತ್ತೇನೆ.

ಈ ವಿಚಾರವನ್ನು ನಾವು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿದ್ದೇವೆ ಮತ್ತು ಇದರ ಬಗ್ಗೆ ಸರ್ಕಾರದ ಹೇಳಿಕೆಯನ್ನೂ ಕೂಡ ಬಯಸುತ್ತೇವೆ. ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಕೆಲಸ